# ಅಧ್ಯಕ್ಷರ ಮಾತು



ಗೌರವಾನ್ವಿತ ಸದಸ್ಯರುಗಳೇ,

ತಮಗೆಲ್ಲರಿಗೂ ಪ್ರೀತಿಯ ಸ್ವಾಗತ,

ನಮ್ಮ ಸಂಘ ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಕಳೆದ 8 ವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಈ ದಿನ ಸರ್ವ ಸದಸ್ಯರ 8ನೇ ಮಹಾಸಭೆಯನ್ನು ಕ್ರಮಬದ್ಧವಾಗಿ ನಡೆಸಿಕೊಳ್ಳಲು ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ.

ಸಂಘವು 2022–23ನೇ ಆರ್ಥಿಕ ವರ್ಷದಲ್ಲಿ ಉತ್ತಮ ವ್ಯವಹಾರ ನಡೆಸಿ ಅತ್ಯುತ್ತಮ ಲಾಭ ಗಳಿಸಿದೆ ಮತ್ತು 2022–23ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನೆಯಲ್ಲಿ ಸಂಘವನ್ನು "ಎ" ವರ್ಗಕ್ಕೆ ವರ್ಗೀಕರಿಸಲಾಗಿದೆ ಎಂದು ತಿಳಿಸಲು ಹೆಮ್ಮೆ ಪಡುತ್ತೇನೆ.

2022–23ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ 'ಎ' ವರ್ಗದಲ್ಲಿ 2344, 'ಸಿ' ವರ್ಗದಲ್ಲಿ 255 ಮತ್ತು 'ಡಿ' ವರ್ಗದಲ್ಲಿ 13 ಹೀಗೆ ಒಟ್ಟು 2612 ಸದಸ್ಯರಿದ್ದು, ರೂ. 23 ಕೋಟಿ 67 ಲಕ್ಷ ದುಡಿಯುವ ಬಂಡವಾಳ ಹೊಂದಿರುತ್ತದೆ. ಆರ್ಥಿಕ ವರ್ಷದಲ್ಲಿ ರೂ. 104 ಕೋಟಿ 62 ಲಕ್ಷ ವ್ಯವಹಾರ ನಡೆಸಿ ವರ್ಷಾಂತ್ಯಕ್ಕೆ ಶೇ.99 ಸಾಲ ವಸೂಲಾತಿಯನ್ನು ಮಾಡಿ 2022–23ನೇ ಆರ್ಥಿಕ ವರ್ಷದಲ್ಲಿ ರೂ. 60 ಲಕ್ಷ 60 ಸಾವಿರ ಲಾಭ ಗಳಿಸಿದೆ. ಈ ಸಾಧನೆಗೆ ಬೆನ್ನೆಲುಬಾಗಿರುವ, ಸಂಘದ ಸದಸ್ಯರು, ಪ್ರಾಮಾಣಿಕ ಸಿಬ್ಬಂದಿಗಳು, ಅತ್ಯುತ್ತಮ ಆಡಳಿತ ಮಂಡಳಿ, ಮಹತ್ವಪೂರ್ಣ ಸಲಹೆಗಾರರಾದ ಶ್ರೀ ಮೋನಪ್ಪ ಪೂಜಾರಿ, ವೃತ್ತಿಪರ ನಿರ್ದೇಶಕರಾಗಿರುವ ಶ್ರೀ. ಲಿಯೋ ನೊರೊನ್ಹಾ, ಶ್ರೀ ಪೆಲಿಕ್ಸ್ ಡಿ ಕೋಸ್ತಾ ಮತ್ತು ಗೌರವಾಧ್ಯಕ್ಷರಾಗಿರುವ ರೆ.ಫಾ. ಲಾರೆನ್ಸ್ ಮಸ್ಕರೇನಸ್‌ರವರ ಅಶೀರ್ವಾದಗಳಿಂದ ಸಂಘವು ಈ ಯಶಸ್ಸನ್ನು ಗಳಿಸಲು ಸಾಧ್ಯವಾಗಿದೆ ಎಂದು ಹೇಳಲು ಹೆಮ್ಮೆಪಡುತ್ತೇನೆ. ಈ ಸಾಧನೆಯಲ್ಲಿ ದೊರೆತ ಕೀರ್ತಿ ಮತ್ತು ಯಶಸ್ಸನ್ನು ಸಂಘದ ಎಲ್ಲಾ ಸದಸ್ಯರುಗಳಿಗೆ ಅರ್ಪಿಸುತ್ತೇನೆ. ನಮ್ಮ ಸಂಘವು ಮಾಡಿರುವ ಸಾಧನೆಯನ್ನು ಗುರುತಿಸಿ ದಿನಾಂಕ 19–08–2023ರಂದು ನಡೆದ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ॥ ಎಂ. ಎನ್. ರಾಜೇಂದ್ರ ಕುಮಾರ್‌ರವರು ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಕಳೆದ 4 ವರ್ಷಗಳಿಂದ ಸತತವಾಗಿ ಸಂಘವು ಈ ಪ್ರಶಸ್ತಿ ಮತ್ತು ಈ ವರೆಗೆ ಒಟ್ಟು ರೂ.40,000/– ಮೊತ್ತದ ಶೇರುಗಳನ್ನು ಪಡೆದಿರುತ್ತದೆ. ಈ ಗೌರವವನ್ನು ತಮಗೆ, ಸಂಘದ ಎಲ್ಲಾ ಸದಸ್ಯರುಗಳಿಗೆ ಅರ್ಪಿಸುತ್ತೇನೆ.

ಆಡಳಿತ ಮಂಡಳಿ ಶಿಫಾರಸ್ಸು ಮಾಡಿದಂತೆ ಈ ಕೆಳಗೆ ಕಾಣಿಸಿದ ಪ್ರಕಾರ ಕಳೆದ ಸಾಲಿನ ಲಾಭಾಂಶವನ್ನು ಘೋಷಣೆ ಮಾಡುತ್ತೇನೆ.

| | | | | |
|---|---|---|---|---|
| 1 | ಕಾದಿರಿಸಿದ ನಿಧಿ | 25% ಕಡಿಮೆಯಾಗದಂತೆ | ರೂ. | 1530000.00 |
| 2 | ಸಹಕಾರ ಶಿಕ್ಷಣ ನಿಧಿ | 2% ಮೀರದಂತೆ | ರೂ. | 90603.00 |
| 3 | ಸಾರ್ವಜನಿಕ ನಿಧಿ | 10% ಕಡಿಮೆಯಾಗದಂತೆ | ರೂ. | 450000.00 |
| 4 | ಸದಸ್ಯರಿಗೆ ಡಿವಿಡೆಂಟ್ | 25% ಮೀರದಂತೆ | ರೂ. | 941177.50 |
| 5 | ಸಿಬ್ಬಂದಿಗಳಿಗೆ ಬೋನಸ್ (ಕನಿಷ್ಠ 8.33%) | ಎರಡು ತಿಂಗಳ ವೇತನ | ರೂ. | 197525.00 |
| 11 | ಸೇಕ್ರೆಡ್ ಹಾರ್ಟ್ ಚರ್ಚಿಗೆ ಸಾರ್ವಜನಿಕ ಸಮಾಜ ಅಭಿವೃದ್ಧಿಗೆ ಅಥವಾ ಮಂಗಳೂರು ಧರ್ಮ ಪ್ರಾಂತ್ಯದ ಸಾಮಾಜಿಕ ಅಭಿವೃದ್ಧಿಗೆ ಅಥವಾ ಸಂಘದಿಂದ ನೇರವಾಗಿ ಸಾಮಾಜಿಕ ಅಭಿವೃದ್ಧಿಗೆ. | 20% ಕಡಿಮೆಯಾಗದಂತೆ | ರೂ. | 500000.00 |
| 12 | ಕಟ್ಟಡ ನಿಧಿ | 10% ಕಡಿಮೆಯಾಗದಂತೆ | ರೂ. | 2350839.39 |
| | | | | **ಒಟ್ಟು ರೂ. 6060144.89** |

ನಿಮ್ಮ ಸಹಕಾರದಲ್ಲಿ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಹೆಚ್ಚಿನ ಲಾಭವನ್ನು ಗಳಿಸಿ ಸದಸ್ಯರುಗಳಿಗೆ ಇದೇ ಪ್ರಮಾಣದಲ್ಲಿ ಲಾಭಾಂಶವನ್ನು ಕೊಡಲು ಸಾಧ್ಯ ಎಂದು ಭರವಸೆ ನೀಡುತ್ತೇನೆ.

ಸಂಘಕ್ಕೆ ಮಾತೃಸಂಸ್ಥೆಯಂತಿರುವ ಮಡಂತ್ಯಾರು ಸೇಕ್ರೆಡ್ ಹಾರ್ಟ್ ಇಗರ್ಜಿಯ ಸಾರ್ವಜನಿಕ ಸಮಾಜ ಅಭಿವೃದ್ಧಿಯ ಪುಣ್ಯದ ಕಾರ್ಯಕ್ರಮದಲ್ಲಿ ಮಾದರಿ ಸಂಸ್ಥೆಯಾಗಿರುವ ಈ ನಮ್ಮ ಸಂಘವು ಸಹಭಾಗಿಯಾಗಿ ಕೈಗೊಳ್ಳುವ ಚಟುವಟಿಕೆಗಳಿಗೆ 2020–21ನೇ ಆರ್ಥಿಕ ವರ್ಷದಲ್ಲಿ ರೂ. 5,00,000/–(ರೂಪಾಯಿ ಐದು ಲಕ್ಷ ಮಾತ್ರ) ಮಡಂತ್ಯಾರು ಸೇಕ್ರೆಡ್ ಹಾರ್ಟ್ ಇಗರ್ಜಿಗೆ ಸಾರ್ವಜನಿಕ ಸಮಾಜ ಅಭಿವೃದ್ಧಿಗಾಗಿ ನೀಡಲು ಆಡಳಿತ ಮಂಡಳಿಯು ಶಿಫಾರಸ್ಸು ಮಾಡಿದೆ. 2020–21ನೇ ಆರ್ಥಿಕ ವರ್ಷದಲ್ಲಿ ಸಂಘದ ಇಬ್ಬರು ಸದಸ್ಯರಿಗೆ ರೂ. 60,000/–(ರೂಪಾಯಿ ಅರವತ್ತು ಸಾವಿರ ಮಾತ್ರ) ವನ್ನು ವೈದ್ಯಕೀಯ ಉದ್ದೇಶಗಳಿಗಾಗಿ ಸದಸ್ಯರ ಕ್ಷೇಮನಿಧಿಯಿಂದ ಆರ್ಥಿಕ ನೆರವು ನೀಡಲಾಗಿದೆ ಮತ್ತು ರೂ. 25,000/–(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)ವನ್ನು ಆಶಾದೀಪಾ ಧಾರ್ಮಿಕ ಕೇಂದ್ರ ಮಡಂತ್ಯಾರು ಇವರಿಗೆ ಸಾರ್ವಜನಿಕ ನಿಧಿಯಿಂದ ಆರ್ಥಿಕ ನೆರವು ನೀಡಲಾಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಸಂಘದ ಲಾಭಾಂಶದಿಂದ ಮಡಂತ್ಯಾರು ಸೇಕ್ರೆಡ್ ಹಾರ್ಟ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ರೆ. ಫಾ. ಜೆರೋಮ್ ಡಿ ಸೋಜಾರವರು ನೀಡಿದ ಮನವಿಯನ್ನು ಪರಿಗಣಿಸಿ ಅವರು ಮಾಡಿದ ಶಿಫಾರಸ್ಸು ಪ್ರಕಾರ ಸದ್ರಿ ವಿದ್ಯಾಸಂಸ್ಥೆಯ ಪ್ರೌಢ ಶಾಲಾ ಮತ್ತು ಪದವಿಪೂರ್ವ ಕಾಲೇಜಿನ ಬಡ ಪ್ರತಿಭಾವಂತ ವಿಧ್ಯಾರ್ಥಿಗಳಿಗೆ ಒಟ್ಟು ರೂ. 1,50,000/–(ರೂಪಾಯಿ ಒಂದು ಲಕ್ಷದ ಐವತ್ತು ಸಾವಿರ ಮಾತ್ರ) ವಿದ್ಯಾರ್ಥಿ ವೇತನ ವಿತರಿಸಲಾಗಿದೆ. ಅಲ್ಲದೇ ಸಂಘದ ಒಬ್ಬ ಸದಸ್ಯರ ಮಗನ ಶೈಕ್ಷಣಿಕ ವರ್ಷದ ಒಟ್ಟು ಶಾಲಾ ಶುಲ್ಕ ರೂ.18,716/– (ರೂಪಾಯಿ ಹದಿನೆಂಟು ಸಾವಿರದ ಏಳ್ನೂರ ಹದಿನಾರು ಮಾತ್ರ) ಸಂಘದಿಂದ ನೆರವು ನೀಡಲಾಗಿದೆ.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದ ಮಡಂತ್ಯಾರು ಸೇಕ್ರೆಡ್ ಹಾರ್ಟ್ ವಿದ್ಯಾ ಸಂಸ್ಥೆಗಳ ಮೂವರು ವಿದ್ಯಾರ್ಥಿಗಳನ್ನು ಗೌರವಿಸಿ ತಲಾ ರೂ.10,000/– ದಂತೆ ಒಟ್ಟು ರೂ.30,000/– (ರೂಪಾಯಿ ಮೂವತ್ತು ಸಾವಿರ ಮಾತ್ರ) ವನ್ನು ಗೌರವ ಧನವಾಗಿ ನೀಡಲಾಗಿದೆ.

ನಮ್ಮ ಸಂಘ ಮತ್ತು ರೋಟರಿ ಕ್ಲಬ್ ಮಡಂತ್ಯಾರು ಇದರ ಜಂಟಿ ಆಶ್ರಯದಲ್ಲಿ ಒಂದು ಅಂಗನವಾಡಿಯ ಬಾಲವನ ಯೋಜನೆಯ ಒಟ್ಟು ವೆಚ್ಚ ರೂ.60,000/– (ರೂಪಾಯಿ ಅರುವತ್ತು ಸಾವಿರ ಮಾತ್ರ) ವನ್ನು ಸಂಘದಿಂದ ನೀಡಿ ಬಾಲವನವನ್ನು ನಿರ್ಮಿಸಲಾಗಿದೆ.

ಮಡಂತ್ಯಾರು ಸೇಕ್ರೆಡ್ ಹಾರ್ಟ್ ಆಂಗ್ಲ ಮಾಧ್ಯಮ ಶಾಲೆಗೆ ರೂ.20,00,000.00 (ರೂಪಾಯಿ ಇಪ್ಪತ್ತು ಲಕ್ಷ ಮಾತ್ರ) ವೆಚ್ಚದಲ್ಲಿ ಪ್ರಸ್ತುತ ಕಾಲದಲ್ಲಿ ವಿಧ್ಯಾರ್ಥಿಗಳಿಗೆ ಅತೀ ಅವಶ್ಯಕವಾದ ಸುಸಜ್ಜಿತ ಅತ್ಯಾಧುನಿಕ ವಿಜ್ಞಾನ ಪ್ರಯೋಗಾಲಯವನ್ನು ಸಂಘದಿಂದ ನಿರ್ಮಿಸಿಕೊಡಲಾಗಿದೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ.

ಸಂಘವು Western Union Money Transfer, Express Money, Transfast ಹಾಗೂ NEFT ಮತ್ತು RTGS ಸೇವೆಗಳನ್ನು ಗ್ರಾಹಕರಿಗೆ ಉತ್ತಮ ರೀತಿಯಲ್ಲಿ ನೀಡಿ ಸಹಕರಿಸುತ್ತದೆ. ಗ್ರಾಹಕರಿಗೆ ತಮ್ಮ ವ್ಯವಹಾರದ ಕುರಿತು ಖಖಖ ಸೇವೆಯನ್ನು ಒದಗಿಸಲಾಗಿದೆ.

ಮುಖ್ಯವಾಗಿ ಯಾವುದೇ ಒಂದು ಸಂಘವು ಯಶಸ್ವಿಯಾಗಿ ಮುಂದುವರೆಯಲು ಆ ಸಂಘದ ಆಡಳಿತ ಮಂಡಳಿಯ ಜೊತೆಗೆ ಸಿಬ್ಬಂದಿ ವರ್ಗದವರು ಕಾರಣರಾಗಿರುತ್ತಾರೆ. ನಮ್ಮ ಸಂಘದ ಉಪಾಧ್ಯಕ್ಷರು ಶ್ರೀ. ಹೆನ್ರಿ ಮೊರಾಸ್ ಮತ್ತು ಎಲ್ಲಾ ನಿರ್ದೇಶಕರು ಸೇರಿ ಒಂದೇ ಮನಸ್ಸಿನವರಾಗಿ ಸಂಘಕ್ಕೆ ನೀಡಿದ ಅವಿರತ ಸೇವೆ ಮತ್ತು ಸಹಕಾರದಿಂದ ಇಂದು ನಮ್ಮ ಸಂಘವು ಉತ್ತುಂಗಕ್ಕೇರಿದೆ. ಈ ಸಂದರ್ಭದಲ್ಲಿ ನಾನು ಪ್ರತ್ಯೇಕವಾಗಿ ಅವರೆಲ್ಲರನ್ನೂ ಗುರುತಿಸಿ ನನ್ನ ಹೃದಯದ ಅಂತರಾಳದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ಪ್ರಕಾರ ನಮ್ಮ ಸಂಘದ ಸಿಬ್ಬಂದಿ ವರ್ಗದವರನ್ನು (ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ. ವಲೇರಿಯನ್ ಡಿ ಸೋಜಾ ಮತ್ತು ತಂಡ) ವಿಶೇಷವಾಗಿ ಗುರುತಿಸುತ್ತಾ ಅವರು ಪ್ರಾಮಾಣಿಕವಾಗಿ ವಹಿಸಿಕೊಂಡ ಕೆಲಸ ಕಾರ್ಯಗಳನ್ನು ಮೆಚ್ಚಿ ಅತೀ ಗೌರವದಿಂದ ಅವರನ್ನು ಅಭಿನಂದಿಸುತ್ತಾ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಘದ ಪ್ರಗತಿಯಲ್ಲಿ ಮಹತ್ತರ ಪಾತ್ರ ವಹಿಸಿದ ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಿಗೂ, ಎಲ್ಲಾ ಠೇವಣಿದಾರರಿಗೂ ಹಾಗೂ ಪೂರ್ಣ ಸಹಕಾರ ನೀಡಿದ ಆಡಳಿತ ಮಂಡಳಿಯ ಸದಸ್ಯರುಗಳಿಗೆ ಮತ್ತು ಸಂಘದ ಮುಖ್ಯ ಸಲಹೆಗಾರರಾದ ಶ್ರೀ. ಮೋನಪ್ಪ ಪೂಜಾರಿಯವರಿಗೂ, ಸಂಘದ ಗೌರವಾಧ್ಯಕ್ಷರಾಗಿರುವ ರೆ. ಫಾ. ಲಾರೆನ್ಸ್, ಮಸ್ಕರೇನ್ಹಸ್‌ರವರಿಗೂ ದ.ಕ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ. ಎಚ್ ಎನ್ ರಮೇಶ್‌ರವರಿಗೂ, ಬೆಳ್ತಂಗಡಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಯಾಗಿರುವ ಶ್ರೀಮತಿ ಪ್ರತಿಮಾರವರಿಗೂ, ಲೆಕ್ಕ ಪರಿಶೋಧಕರಾದ ಮೆ. ಗೊನ್ಸಾಲ್ವಿಸ್ ಮತ್ತು ನಾಯಕ್ ಹಾಗೂ ಮೆ. ಡಿ ಸೋಜಾ ಮತ್ತು ಲೋಬೋರವರಿಗೂ, ಕಾನೂನು ಸಲಹೆಗಾರರಾದ ಶ್ರೀ ಭಗೀರಥ ಜಿ., ಶ್ರೀ ವಸಂತ ಮರಕಡ ಹಾಗೂ ಶ್ರೀಮತಿ. ಉಷಾ ಪೈ ಬಾಳಿಗರವರಿಗೂ, ಸರಾಫರಾದ ಶ್ರೀ ರಾಜೇಶ್ ಆಚಾರ್ಯ, ಶ್ರೀ ಶಶಿಧರ ಆಚಾರ್ಯ, ಶ್ರೀ ಸುಧಾಕರ ಅಚಾರ್ಯರವರಿಗೂ, ಸಂಘದ ಅನುಮೋದಿತ ಭೂ ಮೌಲ್ಯಮಾಪಕರಾದ ಶ್ರೀ ಸುನೀತ್ ಕುಮಾರ್, ಶ್ರೀ ಪ್ರಶಾಂತ್ ಹಟ್ಟತ್ತೋಡಿರವರಿಗೂ ಸಹಕಾರ ನೀಡಿದ ಎಲ್ಲಾ ಸಂಘ ಸಂಸ್ಥೆಗಳಿಗೂ, ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆತ್ಮೀಯರೇ, "Banking is not just about credit and debit; its about building relationships, fostering trust, and empowering financial growth." ಇದರ ಅರ್ಥ ಬ್ಯಾಂಕಿಂಗ್ ಕೇವಲ ಜಮಾ ಖರ್ಚುಗಳ ಲೆಕ್ಕಾಚಾರವಲ್ಲ. ಇದು ಸಂಬಂಧಗಳನ್ನು ನಿರ್ಮಿಸುವುದು, ನಂಬಿಕೆಯನ್ನು ಬೆಳೆಸುವುದು ಮತ್ತು ಆರ್ಥಿಕ ಬೆಳವಣಿಗೆಯನ್ನು ಬಲಪಡಿಸುವುದು. ಈ ನಿಟ್ಟಿನಲ್ಲಿ ನಮ್ಮ ಸಂಘವು ಸದಸ್ಯರ ವಿಶ್ವಾಸವನ್ನು ಗಳಿಸಿ, ನಂಬಿಕೆಯನ್ನು ಉಳಿಸಿಕೊಂಡು ಕಳೆದ 8 ವರ್ಷಗಳಿಂದ ಉತ್ತಮ ಸೇವೆಯನ್ನು ನೀಡುತ್ತ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಹೇಳಿಕೊಳ್ಳಲು ಸಂತೋಷ ಪಡುತ್ತೇನೆ.

**ಜೈ ಸಹಕಾರಿ**
**ವಂದನೆಗಳೊಂದಿಗೆ,**

**ಸಹಿ/–**
**ಶ್ರೀ ಲೆನ್ವಿ ಪಿಂಟೊ**
**(ಅಧ್ಯಕ್ಷರು)**
**ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ನಿ.)**

# ಗೌರವಾಧ್ಯಕ್ಷರ ನುಡಿಗಳು



ಆತ್ಮೀಯರೇ,

ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನಲ್ಲಿರುವ ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.) ಕಳೆದ 8 ವರ್ಷಗಳಿಂದ ಯಶಸ್ವಿ ಸಾಧನೆಯೊಂದಿಗೆ ಪಾಲುದಾರರ, ಫಲಾನುಭವಿಗಳ ಮನಸ್ಸನ್ನು ಗೆದ್ದಿದೆ. ಗ್ರಾಮೀಣ ಪ್ರದೇಶದ ಸಹಕಾರಿ ಸಂಘಗಳಲ್ಲಿಯೇ ಮುಂಚೂಣಿಯಲ್ಲಿ ಮುನ್ನುಗ್ಗುತ್ತಿರುವ ಈ ಸಂಘದ ಬೆಳವಣಿಗೆಯನ್ನು ಗಮನಿಸಿದಾಗ ಬಹಳಷ್ಟು ಅಭಿಮಾನವಾಗುತ್ತದೆ. ಸಂಘವು ಯಾವ ಉದ್ದೇಶದೊಂದಿಗೆ ಪ್ರಾರಂಭವಾಗಿದೆಯೋ ಆ ಎಲ್ಲಾ ಉದ್ದೇಶಗಳನ್ನು ಕನಿಷ್ಠ ಅವಧಿಯಲ್ಲಿ ತಲುಪಲು ಸಾಧ್ಯವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಯಶಸ್ಸು ಎಂಬುದು ಪ್ರತಿಯೊಬ್ಬರ ನಿರೀಕ್ಷೆ. ಯಶಸ್ಸಿನಲ್ಲಿ ನಿಚ್ಚಳತೆ, ಕಾರ್ಯದಲ್ಲಿ ಸ್ಪಷ್ಟತೆ, ಮಾಡುವ ಕೃತ್ಯದಲ್ಲಿ ಮಹತ್ವತೆ, ಗುರಿ ಸಾಧಿಸುವ ಛಲ, ಎಲ್ಲವೂ ಇದ್ದಾಗ ಸಂಸ್ಥೆಯನ್ನು ಮುನ್ನಡೆಸಲು ಸಾಧ್ಯವಾಗುತ್ತದೆ. ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡು ಉತ್ತಮ ನಾಯಕತ್ವದೊಂದಿಗೆ ಸ್ಫೂರ್ತಿದಾಯಕವಾಗಿ ಕೆಲಸ ನಿರ್ವಹಿಸುತ್ತಿರುವ ಸಂಘದ ಅಧ್ಯಕ್ಷರು, ನಿರ್ದೇಶಕರುಗಳಿಗೆ, ಪದಾಧಿಕಾರಿಗಳಿಗೆ, ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಂಘವು ಪ್ರಾರಂಭವಾದಂದಿನಿಂದ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಮತ್ತು ಪ್ರಾಮಾಣಿಕವಾದ ಪ್ರಯತ್ನವನ್ನು ಇಟ್ಟುಕೊಂಡಿದೆ. ಸಂಘಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಸತತ 3 ಬಾರಿ ಸಾಧನಾ ಪ್ರಶಸ್ತಿ ಬಂದಿರುವುದು ಇದಕ್ಕೆ ಸಾಕ್ಷಿಯಾಗಿದೆ. ಸಂಘವು ಕಳೆದ ಸತತ 5 ವರ್ಷಗಳಿಂದ ಶೇ.25 ಪಾಲು ಮುನಾಫೆಯನ್ನು ತನ್ನ ಪಾಲುದಾರರಿಗೆ ನೀಡುತ್ತಿರುವುದು ವಿಶೇಷವಾಗಿದೆ. ಸಂಘದಲ್ಲಿ ಸಾಲ ಪಡೆದವರು ಸಕಾಲದಲ್ಲಿ ಹಿಂತಿರುಗಿಸಿ ಕಳೆದ ಏಳು ವರ್ಷಗಳಲ್ಲಿ ಶೇ.100 ಮರುಪಾವತಿಯನ್ನು ಮಾಡಿರುತ್ತಾರೆ. ಸಂಘವು ಸಾಮಾಜಿಕ ಚಟುವಟಿಕೆಗಳಿಗೆ, ವಿದ್ಯಾರ್ಥಿಗಳಿಗೆ, ಅಶಕ್ತರಿಗೆ ತಮ್ಮ ಲಾಭಾಂಶದಲ್ಲಿ ಸಹಾಯ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಸುಮಾರು 2400ಕ್ಕೂ ಮಿಕ್ಕಿದ ಖಾತೆದಾರರು, 2600ಕ್ಕೂ ಮಿಕ್ಕಿದ ಪಾಲುದಾರರು ವಿವಿಧ ರೀತಿಯ ತಮ್ಮ ಅವಶ್ಯಕತೆಗಳಿಗೆ ಆರ್ಥಿಕ ಸಹಾಯವನ್ನು ಪಡೆದುಕೊಂಡು ಅಭಿವೃದ್ಧಿಯನ್ನು ಕಂಡುಕೊಂಡಿದ್ದಾರೆ. ಮಡಂತ್ಯಾರು ಪರಿಸರದಲ್ಲಿ 10ಕ್ಕೂ ಹೆಚ್ಚಿನ ಸಹಕಾರಿ ಸಂಘ, ಬ್ಯಾಂಕುಗಳಿದ್ದು, ಯಾವುದೇ ಕಾರಣಕ್ಕೂ ನಮ್ಮ ಸಂಘಕ್ಕೆ ಇದರಿಂದ ಅಡಚಣೆ ಆಗಲಿಲ್ಲ ಎಂಬುದನ್ನು ತಿಳಿಸಲು ಅಭಿಮಾನವಾಗುತ್ತದೆ. ಈ ಎಲ್ಲಾ ಕಾರಣಗಳನ್ನು ಅವಲೋಕಿಸಿದಾಗ ನಮ್ಮ ಸಂಘವು ಈ ಪ್ರದೇಶದ ಜನರಿಗೆ ವರವಾಗಿ ಪರಿಣಮಿಸಿದೆ ಎಂದು ಹೇಳಲು ಸಂತೋಷ ಪಡುತ್ತಿದ್ದೇನೆ.

ನಾನು ಮಡಂತ್ಯಾರು ಸೇಕ್ರೆಡ್ ಹಾರ್ಟ್ ದೇವಾಲಯದ ಧರ್ಮಗುರುಗಳಾಗಿದ್ದ ಸಂದರ್ಭದಲ್ಲಿ ಈ ಸಂಘದ ಸ್ಥಾಪನೆಯ ಪ್ರಸ್ತಾಪಕ್ಕೆ ಪೂರ್ಣ ಪ್ರಮಾಣದ ಸಹಕಾರವನ್ನು ನೀಡಿದ್ದು ಸಾರ್ಥಕವಾಯಿತು ಎಂಬುದು ನನ್ನ ಮನೋಭಾವನೆಯಾಗಿದೆ. ಈ ಸಂಘದ ಗೌರವಾಧ್ಯಕ್ಷನಾಗಿದ್ದು, ಈ ಸಂಘದ ಇನ್ನಷ್ಟು ಸಾಧನೆಯನ್ನು ನೋಡಲು ಕಾತುರನಾಗಿದ್ದೇನೆ. ಸಂಘದಲ್ಲಿ ಅಧ್ಯಕ್ಷರಾಗಿ ಶ್ರೀ ಲೆನ್ನಿ ಪಿಂಟೊ, ಉಪಾಧ್ಯಕ್ಷರಾಗಿ ಶ್ರೀ ಹೆನ್ರಿ ಮೊರಾಸ್, ಮುಖ್ಯ ಸಲಹೆಗಾರರಾಗಿ ಶ್ರೀ ಮೋನಪ್ಪ ಪೂಜಾರಿ, ವೃತ್ತಿಪರ ನಿರ್ದೇಶಕರು, ನಿರ್ದೇಶಕರುಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರನ್ನು ಎಲ್ಲರನ್ನು ಈ ಸಂದರ್ಭದಲ್ಲಿ ಅಭಿನಂದಿಸಿ ಶುಭ ಹಾರೈಸುತ್ತೇನೆ. ಸಂಘದಲ್ಲಿ ಪ್ರಯೋಜನ ಪಡೆಯುತ್ತಿರುವ ಪ್ರತಿಯೊಬ್ಬರಿಗೂ ಒಳಿತಾಗಲಿ, ತಮ್ಮ ಕನಸುಗಳು ನನಸಾಗಲಿ, ಸಂಘದ ಮೂಲಕ ಇನ್ನಷ್ಟು ಪ್ರಯೋಜನವನ್ನು ಪಡೆದುಕೊಂಡು ತಮ್ಮ ಅವಶ್ಯಕತೆಗಳನ್ನು ಬಗೆಹರಿಸಿಕೊಳ್ಳಿ ಎಂದು ವಿನಂತಿಸುತ್ತೇನೆ. ಸಂಘವು ಎಲ್ಲಾ ರೀತಿಯಿಂದಲೂ ಯಶಸ್ಸು ಕಾಣಲಿ, ಮುಂದಿನ ವರ್ಷ ಸಂಘದ ದಶಮಾನೋತ್ಸವದ ಮಹಾಸಭೆಯನ್ನು ಸಂಭ್ರಮ ಸಡಗರದಿಂದ ಆಚರಿಸಲು ನಮಗೆಲ್ಲರಿಗೂ ದೇವರು ಕರುಣಿಸಲು ಎಂದು ಪ್ರಾರ್ಥಿಸಿಕೊಂಡು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

**ಫಾ. ಲಾರೆನ್ಸ್ ಮಸ್ಕರೇನ್ಹಸ್**
**ಗೌರವಾಧ್ಯಕ್ಷರು**

## ಗೌರವಾನ್ವಿತರು



ವಂ. ಫಾ. ಲಾರೆನ್ಸ್ ಮಸ್ಕರೇನ್ಹಸ್
(ಗೌರವಾಧ್ಯಕ್ಷರು)



ಶ್ರೀ ಮೋನಪ್ಪ ಪೂಜಾರಿ
ಕಂಡೆತ್ಯಾರು
(ಮುಖ್ಯ ಸಲಹೆಗಾರರು)



ಶ್ರೀ ಲಿಯೋ ನೊರೊನ್ಹಾ
(ವೃತ್ತಿಪರ ನಿರ್ದೇಶಕರು)



ಶ್ರೀ ಫೆಲಿಕ್ಸ್ ಡಿ ಕೊಸ್ತಾ
(ವೃತ್ತಿಪರ ನಿರ್ದೇಶಕರು)

## ಆಡಳಿತ ಮಂಡಳಿ



ಶ್ರೀ ಲೆನ್ನಿ ಪಿಂಟೊ
(ಅಧ್ಯಕ್ಷರು)



ಶ್ರೀ ಹೆನ್ರಿ ಮೊರಾಸ್
(ಉಪಾಧ್ಯಕ್ಷರು)

## ನಿರ್ದೇಶಕರು



ಶ್ರೀ ಸಿರಿಲ್ ಸಿಕ್ವೇರಾ



ಶ್ರೀ ವಿವೇಕ್ ವಿನ್ಸೆಂಟ್ ಪಾಯ್ಸ್



ಶ್ರೀ ಜೋಯಲ್ ಗೊಡ್‌ಫ್ರೀ
ಮೆಂಡೋನ್ಸಾ



ಶ್ರೀ ಲಿಯೋ ರೊಡ್ರಿಗಸ್



ಶ್ರೀ ಗ್ರೆಗೋರಿ ಸೇರಾ



ಶ್ರೀ ರೊನಾಲ್ಡ್ ಸಿಕ್ವೇರಾ



ಶ್ರೀಮತಿ ಸೆಲೆಸ್ತಿನ್ ಡಿ'ಸೋಜಾ



ಶ್ರೀಮತಿ ಗ್ರೇಸಿ ರೀಟಾ ರೆಬೆಲ್ಲೊ

## ಸಿಬ್ಬಂದಿ ವರ್ಗ



ಶ್ರೀ ವಲೇರಿಯನ್ ಡಿ'ಸೋಜಾ
(ಮುಖ್ಯ ಕಾರ್ಯನಿರ್ವಹಣಾಧಿಕಾರಿ)



ಶ್ರೀ ಡೋನ್ ಪ್ರವೀಣ್ ಕ್ರಾಸ್ತಾ
(ಹಿರಿಯ ಲೆಕ್ಕಾಧಿಕಾರಿ)



ಶ್ರೀಮತಿ ಶ್ವೇತಾ ರಾವ್
(ಲೆಕ್ಕಾಧಿಕಾರಿ)



ಶ್ರೀ ಜೀವನ್
(ಗುಮಾಸ್ತ)



ಶ್ರೀ ರಮೇಶ್ ಬಿ. ಆರ್.
(ಸಹಾಯಕ)



ಶ್ರೀ ಅಲ್ವಿನ್ ಪಿಂಟೊ
(ಪಿಗ್ಮಿ ಸಂಗ್ರಾಹಕ)

ನಮ್ಮ ಸಂಘ ಮತ್ತು ರೋಟರಿ ಕ್ಲಬ್ ಮಡಂತ್ಯಾರು ಇದರ ಜಂಟಿ ಆಶ್ರಯದಲ್ಲಿ ನಿರ್ಮಿಸಿಕೊಟ್ಟ ಅಂಗನವಾಡಿಯ ಬಾಲವನದ ಉದ್ಘಾಟನಾ ಸಮಾರಂಭ





# ಸಂಘದ ಏಳನೇ ವಾರ್ಷಿಕ ಮಹಾಸಭೆ 11-09-2022



ಪ್ರಾರ್ಥನೆ



ನಿರ್ದೇಶಕರಿಂದ ಸ್ವಾಗತ



ಅಧ್ಯಕ್ಷೀಯ ಮಾತುಗಳು



ಗೌರವಾಧ್ಯಕ್ಷರಿಂದ ಹಿತನುಡಿಗಳು



ಮುಖ್ಯ ಸಲಹೆಗಾರರಿಂದ ಮೆಚ್ಚುಗೆಯ ಮಾತುಗಳು



ಸಾಧಕರಿಗೆ ಗೌರವಾರ್ಪಣೆ

ಆಡಳಿತ ಮಂಡಳಿಯ ಜೊತೆ ಸಿಬ್ಬಂದಿ ವರ್ಗ



# ಸಂಘದ ಏಳನೇ ವಾರ್ಷಿಕ ಮಹಾಸಭೆ 11-09-2022





















# ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ದಿನಾಂಕ 12–11–2021 ರಂದು ದೊರೆತ ಗೌರವ






# ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

(ಸಂಖ್ಯೆ : ಡಿ.ಆರ್.ಪಿ:ಎಸ್.9:ಆರ್.ಜಿ.ಎನ್.:41227:2014-15)
ಸೇಕ್ರೆಡ್ ಹಾರ್ಟ್ ಚರ್ಚ್ ಕಮರ್ಶಿಯಲ್ ಕಾಂಪ್ಲೆಕ್ಸ್, 1 ನೇ ಮಹಡಿ
ಮುಖ್ಯರಸ್ತೆ, ಮಡಂತ್ಯಾರು ಅಂಚೆ, ಬೆಳ್ತಂಗಡಿ ತಾಲೂಕು - 574224, ದ.ಕ. ಜಿಲ್ಲೆ
email: sacredheartsahakarisangha@gmail.com ದೂ: 08256-298568



















ಅತೀ ಶೀಘ್ರದಲ್ಲಿ
ಸಾಲ ಮಂಜೂರಾತಿ
ಮತ್ತು ಬಿಡುಗಡೆ

## ನಿರಖು ಠೇವಣಿಗಳ ಮೇಲಿನ ಆಕರ್ಷಕ ಬಡ್ಡಿದರಗಳು

| | | | |
|---|---|---|---|
| 46 ದಿನಗಳಿಗೆ | - 5.00% | 1 ವರ್ಷಕ್ಕೆ | - 8.75% |
| 3 ತಿಂಗಳುಗಳಿಗೆ | - 6.50% | 2 ವರ್ಷಗಳಿಗೆ | - 8.50% |
| 6 ತಿಂಗಳುಗಳಿಗೆ | - 7.00% | 3 ವರ್ಷಗಳಿಗೆ | - 8.25% |

ಹಿರಿಯ ನಾಗರಿಕರಿಗೆ - 0.50% ಅಧಿಕ ಬಡ್ಡಿ

## ಸಾಲನ ಬಡ್ಡಿದರಗಳು

| | | | |
|---|---|---|---|
| ವಾಹನ ಸಾಲ | - 11.00% | ವ್ಯಾಪಾರ ಸಾಲ | - 13% |
| ಗ್ರಹ ಸಾಲ | - 11.50% | ವೈಯುಕ್ತಿಕ ಸಾಲ | - 14% |
| ಅಡಮಾನ ಸಾಲ | - 12.50% | | |

## ನಮ್ಮ ಇತ್ತರ್ರ ಸೇವೆಗಳು


WESTERN UNION MONEY TRANSFER

Trans-Fast WORLDWIDE MONEY TRANSFER

XPRESS MONEY




"ಜೈ ಸಹಕಾರಿ"




In The Name of Sacred Heart of Jesus

ಮಂಜುಶ್ರೀ ಪ್ರಿಂಟರ್ಸ್, ಉಜಿರೆ